**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**MVC No.272/2019**

| | | |
|---|---|---|
| ಸಾಕ್ಷಿದಾರರ ಹೆಸರು | : ಡಾ.ಅಭಿನಂದನ್ ಸಾವುಕಾರ | ***P.W-2*** |
| ತಂದೆಯ ಹೆಸರು | : ಹನುಮಪ್ಪ | |
| ವಯಸ್ಸು | : 46 ವರ್ಷ | |
| ಉದ್ಯೋಗ | : ಖಾಸಗಿ ವೈದ್ಯಾಧಿಕಾರಿಗಳು | |
| ವಾಸ | : ರಾಣೇಬೆನ್ನೂರು | |

**ದಿನಾಂಕಃ 17-04-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದಃ**

2012 ರಿಂದ 2024 ರವರೆಗೂ ನಾನು ಸಮುದಾಯ ಆರೋಗ್ಯ ಕೇಂದ್ರ ಗುತ್ತಲ ದಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 06-05-2018 ರಂದು ಬೆಳಿಗ್ಗೆ 11.40 ಗಂಟೆಗೆ ಬೀರೇಶ್ ದೇವೇಂದ್ರಪ್ಪ ಲಕ್ಕೊಳ್ಳಿ , ವಯಸ್ಸು 53 ವರ್ಷ , ಸಾಃ ಶಿರಗೋಡ ತಾಃಹಾನಗಲ್ ರವರು ರಸ್ತೆ ಅಪಘಾತದಲ್ಲಿ ಆದ ಗಾಯದ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ಅವರನ್ನು ಪರೀಕ್ಷೆ ಮಾಡಲಾಗಿ ಸದರಿಯವರ ತಲೆಗೆ ತೀವ್ರ ಸ್ವರೂಪದ ಗಾಯವಾಗಿತ್ತು. ಅವರಿಗೆ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಹಾವೇರಿಯ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿ ಕೊಟ್ಟಿರುತ್ತೇನೆ. ಈ ಬಗ್ಗೆ ನಾನು ನಿಪಿ-5 ರಂತೆ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರದಲ್ಲಿ ತಪ್ಪಾಗಿ ಸಮಯವನ್ನು 11.40 ಪಿಎಂ ಎಂದು ನಮೂದು ಮಾಡಿದ್ದು ಅದು 11.40 ಎ.ಎಂ. ಆಗಬೇಕಾಗಿರುತ್ತದೆ. ಸಾಕ್ಷಿ ಎಂ.ಎಲ್.ಸಿ ರಿಜಿಸ್ಟರನ ನೋಟರಿ ಪ್ರತಿ ಹಾಜರು ಪಡಿಸಿದ್ದು ಅದನ್ನು ಮೂಲ ಪ್ರತಿಯೊಂದಿಗೆ ಹೋಲಿಸಿ ನೋಡಿ ಅದನ್ನು ನಿಪಿ-14 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಎಸ್.ಎಸ್.ಕೆ. ವಕೀಲರಿಂದಃ**

ನಿಪಿ-5 ನ್ನು ನಾನೇ ಬರೆದಿರುತ್ತೇನೆ. ನಿಪಿ-5 ನ್ನು ನಾನು ಎಂ.ಎಲ್.ಸಿ ರಿಜಿಸ್ಟರ ಆಧಾರದ ಮೇಲೆ ಬರೆದಿರುತ್ತೇನೆ. ನಿಪಿ-14 ನ್ನು ಬೇರೆ ವೈದ್ಯರು ಬರೆದಿರುತ್ತಾರೆ.

ನಿಪಿ-14 ನ್ನು ನಾನೇ ಹೇಳಿ ಬರೆಸಿರುತ್ತೇನೆ ಆದರೆ ಆ ವೈದ್ಯರ ಹೆಸರು ಈಗ ನನಗೆ ನೆನಪಿರುವುದಿಲ್ಲ. ನಮ್ಮ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸಿಸಿ ಟಿವಿ ಕ್ಯಾಮರಾ ಇರುತ್ತದೆ. ಡಿವಿಆರ್ ನಲ್ಲಿ ರೆಕಾರ್ಡ ಆಗುತ್ತದೆ ಎಂದರೆ ಸರಿ ಸಾಕ್ಷಿ ಮುಂದುವರೆದು ರೆಕಾರ್ಡಿಂಗ್ ಒಂದು ತಿಂಗಳು ಮಾತ್ರ ಇರುತ್ತದೆ ಎಂದು ಹೇಳುತ್ತಾರೆ. ರೆಕಾರ್ಡಿಂಗ್ ಒಂದು ತಿಂಗಳು ಮಾತ್ರ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಪೋಲಿಸ್ ಇಲಾಖೆ ಮತ್ತು ಆರೋಗ್ಯ ಇಲಾಖೆಯಲ್ಲಿ 24 ಗಂಟೆಗಳ ಮಾದರಿಯಲ್ಲಿ ವೇಳೆಯು ದಾಖಲೆಗಳಲ್ಲಿ ನಮೂದು ಆಗುತ್ತದೆ ಎಂದರೆ ಸರಿಯಲ್ಲ. 24 ಗಂಟೆಯ ಮಾದರಿಯಲ್ಲಿ ಆದರೆ ಬೆಳಿಗ್ಗೆ 11 ಗಂಟೆ 40 ನಿಮಿಷ ಆಗುತ್ತದೆ. ಎಂ.ಎಲ್.ಸಿ ರಿಜಿಸ್ಟರನ ಕಸ್ಟೋಡಿಯನ್ ವೈದ್ಯಾಧಿಕಾರಿಗಳು ಆಗಿರುತ್ತಾರೆ. ಎಂ.ಎಲ್.ಸಿ ರಿಜಿಸ್ಟರ ಬುಕ್ ಮುಕ್ತಾಯವಾದ ನಂತರ ಎಫ್.ಡಿ.ಸಿ ರವರಿಗೆ ಕೊಡುತ್ತೇವೆ. ನ್ಯಾಯಾಲಯದಿಂದ ಸಮನ್ಸ ಬಂದಾಗ ಹಳೇಯ ಎಂ.ಎಲ್.ಸಿ ರಿಜಿಸ್ಟರನ್ನು ಕಸ್ಟೋಡಿಯನ್ ರವರಿಗೆ ಅರ್ಜಿ ಕೊಟ್ಟು ಪಡೆಯಬೇಕು ಎಂದರೆ ಸಾಕ್ಷಿ ಆ ರೀತಿ ಅರ್ಜಿ ಕೊಡುವ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ಯಾವುದೇ ಸಹಿ ಪಡೆಯದೇ ಎಂ.ಎಲ್.ಸಿ ರಿಜಿಸ್ಟರ ಕೊಡುತ್ತಾರೆ. ದಾಖಲೆಯಲ್ಲಿ ಏನಾದರೂ ಆದರೆ ಅದು ಹೆಡ್ ಆಫ್ ದಿ ಇನ್ಸೂಟ್ಯೂಶನ್ ರವರಿಗೆ ಜವಾಬ್ದಾರಿ ಬರುತ್ತದೆ. ನಾನು ಈ ದಿನ ಆ ಆಸ್ಪತ್ರೆಯ ಹೆಡ್ ಆಫ್ ದಿ ಡಿಪಾರ್ಟಮೆಂಟ್ ಅಲ್ಲ ಎಂದರೆ ಸರಿ. ನ್ಯಾಯಾಲಯದಿಂದ ಸಮನ್ಸ ಹೆಡ್ ಆಫ್ ದಿ ಇನ್ಸೂಟ್ಯೂಶನ್ ರವರಿಗೆ ಹೋಗಿದ್ದು ಆ ಸಮಯದಲ್ಲಿ ನಾನೇ ವೈದ್ಯನಾಗಿದ್ದರಿಂದ ನನಗೆ ಎಂ.ಎಲ್.ಸಿ ರಿಜಿಸ್ಟರ ನೀಡಿ ಸಾಕ್ಷಿ ಹೇಳಲು ಕಳುಹಿಸಿರುತ್ತಾರೆ. ನನಗೆ ಈ ಬಗ್ಗೆ ವಾಟ್ಸೇಪ್ ಕಳುಹಿಸಿರುತ್ತಾರೆ ಮತ್ತು ಪೋನ್ ಮಾಡಿ ಹೇಳಿರುತ್ತಾರೆ. ನಾನು ನಜರಚುಕಿನಿಂದ ಎಂಎಲ್.ಸಿ ರಿಜಿಸ್ಟರ ಮತ್ತು ಗಾಯದ ಪ್ರಮಾಣ ಪತ್ರದಲ್ಲಿ ಸಮಯವನ್ನು 11.40 ಪಿ.ಎಂ ಎಂದು ತಪ್ಪಾಗಿ ಬರೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 4 ನೇ ಎದುರುದಾರರ ಪರ ಶ್ರೀ.ಎನ್.ಡಿ.ವಕೀಲರಿಂದಃ</u>

ಗುತ್ತಲ ಆಸ್ಪತ್ರೆ ಸಮುದಾಯ ಆರೋಗ್ಯ ಕೇಂದ್ರವಾಗಿರುತ್ತದೆ. ಅಲ್ಲಿ ಗಾಯಾಳುಗಳನ್ನು ಒಳರೋಗಿಯಾಗಿ ದಾಖಲಿಸಿಕೊಳ್ಳುವ ವ್ಯವಸ್ಥೆ ಇರುತ್ತದೆ ಆದರೆ

ಅರ್ಜಿದಾರರಿಗೆ ತಲೆಗೆ ತೀವ್ರ ಪೆಟ್ಟಾಗಿದ್ದರಿಂದ ನಮ್ಮ ಆಸ್ಪತ್ರೆಯಲ್ಲಿ ಸಿಟಿ ಸ್ಕ್ಯಾನ್ ಇಲ್ಲದೇ ಇದ್ದುದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಹಾವೇರಿಯ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಆ ಸಮಯದಲ್ಲಿ ಖಾಯಂ ವೈದ್ಯಾಧಿಕಾರಿಯಾಗಿ ನಾನೊಬ್ಬನೆ ಇದ್ದೇನು. ಅಲ್ಲಿ ವಸತಿ ಗೃಹದ ವ್ಯವಸ್ಥೆ ಇರುವುದಿಲ್ಲ. ನಾನು ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇನು. ನಾನು ಆಗ ರಾಣೇಬೆನ್ನೂರಿನಲ್ಲಿ ವಾಸವಾಗಿದ್ದೆ ಎಂದರೆ ಸರಿಯಲ್ಲ. ಎಂ.ಎಲ್.ಸಿ ಯನ್ನು ವೈದ್ಯಾಧಿಕಾರಿಗಳನ್ನು ಹೊರತು ಪಡಿಸಿ ಬೇರೆ ಯಾರೂ ಬರೆಯಬಾರದು ಎಂದರೆ ಸರಿ. ಆ ಸಮಯದಲ್ಲಿ ಬೇರೆ ವೈದ್ಯಾಧಿಕಾರಿಗಳು ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಡ್ಯೂಟಿ ಡಾಕ್ಟರ ಆಗಿ ನಾನೇ ಎಂ.ಎಲ್.ಸಿ ಬರೆಯಬೇಕು ಎಂದರೆ ಸಾಕ್ಷಿ ನಾನೇ ಹೇಳಿ ಬರೆಸಿರುತ್ತೇನೆ ಎಂದು ಹೇಳುತ್ತಾರೆ. ಎಂ.ಎಲ್.ಸಿ ರಿಜಿಸ್ಟರನಲ್ಲಿ ಅದನ್ನು ಬರೆದವರ ಸಹಿ ಇರುವುದಿಲ್ಲ ಎಂದರೆ ಸರಿ. ಎಂ.ಎಲ್.ಸಿ ರಿಜಿಸ್ಟರನಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿಯಾಗಿರುತ್ತವೆ ಆದರೆ ಸಮಯ ಮಾತ್ರ ವ್ಯತ್ಯಾಸವಾಗಿರುತ್ತದೆ . ನಾನು ಆ ದಿನ ಕರ್ತವ್ಯದ ಮೇಲೆ ಇಲ್ಲದೇ ಇದ್ದರೂ ಸಹ ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.